**ಸಾಕ್ಷಿಯನ್ನು ದಿನಾಂಕ 11-11-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆ 3 ನೇ ಎದುರುದಾರರ ಪರ ಶ್ರೀ ಜಿ.ಎಸ್.ಸಿ. ವಕೀಲರಿಂದಃ-**

ನಾನು ನ್ಯಾಯಾಲಯಕ್ಕೆ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿದೆ. ಅದನ್ನು ನನ್ನ ಮುಖ್ಯ ವಿಚಾರಣೆಯ ಭಾಗವನ್ನಾಗಿ ಪರಿಗಣಿಸಬೇಕೆಂದು ಪ್ರಾರ್ಥಿಸುತ್ತೇನೆ .

ವಾಹನ ವಿಮೆಯ ಟ್ರೂ ಕಾಪಿಯನ್ನು ನಿಆರ್-1 ಎಂದು, ನೋಟಿಸು ನಿಆರ್-2 ಎಂದು, ಅಂತಿಮ ವರದಿಯ ಟ್ರೂ ಕಾಪಿಯನ್ನು ನಿಆರ್-3 ಎಂದು ಗುರುತಿಸಲಾಯಿತು.

ಆದ್ದರಿಂದ ಪರಿಹಾರ ಅರ್ಜಿಯನ್ನು ನಮ್ಮ ವಿರುದ್ದ ವಜಾ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲುಃ-** 1 ನೇ ಎದುರುದಾರರ ಪರ ಶ್ರೀ ಡಿ.ಎನ್.ಹೆಚ್. ವಕೀಲರಿಂದಃ

ಅಪಘಾತದ ಸಂಧರ್ಭದಲ್ಲಿ ಅಪಘಾತಕ್ಕೊಳಗಾದ ವಾಹನದ ಮಾಲೀಕರು ಸಿ.ಎನ್. ಚಂದ್ರಶೇಖರ್ ಆಗಿದ್ದರು ಎಂದರೆ ಸರಿಯಲ್ಲ. ವಾಹನದ ವಿಮೆ ಮಾಡಿಸಿದವರು 2 ನೇ ಎದುರುದಾರರು ಎಂದರೆ ಸರಿ. ಅಪಘಾತ ದಿನದಂದು ವಾಹನದ ವಿಮೆ ಚಾಲ್ತಿಯಲ್ಲಿತ್ತು ಎಂದರೆ ಸರಿ. ಮೃತ ಹಾಲಪ್ಪ ಗೌಡರು ನಮ್ಮ ಸಂಸ್ಥೆಯಲ್ಲಿ ವಿಮೆ ಮಾಡಿಸಿದ್ದರು ಎಂದರೆ ಸರಿ. ಸದರಿ ವಿಮೆಯು ಸಹ ಅಪಘಾತ ದಿನದಂದು ಚಾಲ್ತಿಯಲ್ಲಿತ್ತು ಎಂದರೆ ಸರಿ. ಹಾಲಪ್ಪ ಗೌಡರು ಮಾಡಿಸಿದ್ದ ವಿಮೆಯು

ಯಾವ ಸ್ವರೂಪದ್ದು ಎಂದರೆ ಸಾಕ್ಷಿಯು ಥರ್ಡ ಪಾರ್ಟಿ ಸ್ವರೂಪದ್ದು ಎಂದು ಹೇಳುತ್ತಾರೆ.

ಅಪಘಾತ ಪಡಿಸಿದ್ದು ಎಂದು ಹೇಳುವ ವಾಹನದ ಚಾಲಕರು ಮತ್ತು ಮಾಲೀಕರು ಯಾರಾಗಿದ್ದರು ಎಂದು ತನಿಖೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಅರ್.ಸಿ ಯಲ್ಲಿ ಸಿ ತಂಗಚ್ಚನ್ ರವರ ಹೆಸರು ಇತ್ತು ಎಂದು ಹೇಳುತ್ತಾರೆ. 1 ನೇ ಎದುರುದಾರನ ಹೆಸರಿಗೆ ವಾಹನದ ಮಾಲೀಕತ್ವ ಯಾವಾಗ ವರ್ಗಾವಣೆಯಾಗಿತ್ತು ಎಂದು ಹೇಳುತ್ತಿರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಹೇಳುತ್ತಾರೆ. ಅಪಘಾತದ ದಿನಾಂಕದಂದು ವಾಹನದ ಮಾಲೀಕ 1 ನೇ ಎದುರುದಾರರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಅಪಘಾತ ದಿನದಂದು ವಾಹನದ ವಿಮೆ 1 ನೇ ಎದುರುದಾರನ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿ. ವಿಮೆಯನ್ನು ಪಾಲಿಸಿ ದಾರರಿಗೆ ಕೊಡುವಾಗ ವಾಹನದ ಮಾಲೀಕರು ಯಾರೆಂದು ಖಚಿತಪಡಿಸಿಕೊಂಡು ವಿಮೆ ಕೊಟ್ಟಿರುತ್ತೇವೆ ಎಂದರೆ ಸರಿ. 2 ನೇ ಎದುರುದಾರನ ಹೆಸರಿನಲ್ಲಿ ವಿಮೆ ಚಾಲ್ತಿಯಲ್ಲಿದ್ದ ಕಾರಣ ನಾವೇ ಪರಿಹಾರ ಕೊಡಲು ಭಾದ್ಯಸ್ಥರು ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಅರ್ಜಿದಾರರ ಪರ ಟಿ.ಬಿ.ಎಂ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

**(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)**

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.